


ಹಸಿರಿನ ಸಾಮ್ರಾಜ್ಯದ ಹಿನ್ನೆಲೆಯಲ್ಲಿ ಬೆಟ್ಟ ಹಾಗೂ ಶುಭ್ರ ಆಗಸ

## ತಲುಪುವ ಬಗೆ

ಶ್ರೀನಗರವನ್ನು ವಿಮಾನದ ಮೂಲಕ ನೇರವಾಗಿ ತಲುಪಬಹುದು. ಹತ್ತಿರದ ರೈಲು ನಿಲ್ದಾಣ ಜಮ್ಮು ತಾವಿ 305 ಕಿ.ಮೀ. ದೂರದಲ್ಲಿದೆ. ಅಲ್ಲಿಂದ ರಾಷ್ಟ್ರೀಯ ಹೆದ್ದಾರಿ 1ಎ ಮಾರ್ಗವಾಗಿ ಶ್ರೀನಗರಕ್ಕೆ ಬರಬಹುದು ಫೆಬ್ರುವರಿಯಿಂದ ಜುಲೈವರೆಗೆ ಉತ್ತಮ ಹವಾಗುಣ ಇರುವುದರಿಂದ ಶ್ರೀನಗರ ಪ್ರವಾಸ ಕೈಗೊಳ್ಳಬಹುದು. ಶಾಲಿಮಾರ್ ಉದ್ಯಾನವು ಶ್ರೀನಗರ ವಿಮಾನನಿಲ್ದಾಣದಿಂದ 25 ಕಿ.ಮೀ., ರೈಲು ನಿಲ್ದಾಣದಿಂದ 22 ಕಿ.ಮೀ. ಮತ್ತು ಶ್ರೀನಗರದ ಲಾಲ್ ಚೌಕ್‌ನಿಂದ 14 ಕಿ.ಮೀ. ದೂರದಲ್ಲಿದೆ.

ಉದ್ಯಾನವನದ ವಿನ್ಯಾಸವೂ ಆಕರ್ಷಕವಾಗಿದೆ.

ಮುಖ್ಯ ನೀರಿನ ಕಾಲುವೆಯ ಇಕ್ಕೆಲಗಳಲ್ಲಿ, ಚಿನಾರ್ ಮರಗಳ ಸಾಲುಗಳ ಬದಿಯಲ್ಲಿ ಸಾಗುವ ಹಾದಿಯು ನಮ್ಮನ್ನು ಮೇಲಿನ ಹಂತಗಳಿಗೆ ಕೊಂಡೊಯ್ಯುತ್ತದೆ. ಅವಶ್ಯವಿದ್ದಲ್ಲಿ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ. ಉದ್ಯಾನವನದ ನಡುವಿನಲ್ಲಿ ಉದ್ದಕ್ಕೂ ನೀರಿನ ಹರಿವು ಇದ್ದು, ಅದರಲ್ಲಿ ವಿವಿಧ ಬಗೆಯ 410 ಕಾರಂಜಿಗಳಿವೆ. ಇವುಗಳಿಂದ ಚಿಮ್ಮುವ ನೀರ ಹನಿಗಳ ಸಿಂಚನದಿಂದ ಮೈಮನ ಮುದಗೊಳ್ಳುತ್ತದೆ. ಪ್ರತಿ ಹಂತದಲ್ಲಿಯೂ ಒಂದಿಲ್ಲೊಂದು ವಿಶೇಷವನ್ನು ಹೊಂದಿರುವಂತೆ ಉದ್ಯಾನವನ್ನು ವಿನ್ಯಾಸಗೊಳಿಸಲಾಗಿದೆ. ಶಾಲಿಮಾರ್ ಉದ್ಯಾನವು ಚೀನಿ ಖಾನೆಗಳೆಂದು ಕರೆಯಲಾಗುತ್ತಿದ್ದ ಕಮಾನು ಹೊಂದಿದ ದೀಪದ ಗೂಡುಗಳಿಗೆ ಪ್ರಸಿದ್ಧವಾದುದು. ಗೂಡುಗಳಲ್ಲಿ ಮೊದಲು ದೀಪಗಳನ್ನು ಹಚ್ಚಿರಿಸಲಾಗುತ್ತಿತ್ತು. ಈಗ ಬಣ್ಣ ಬಣ್ಣದ ಹೂಗಿಡಗಳ ಕುಂಡಗಳನ್ನು ಇರಿಸಿ ಅವುಗಳು ನೀರಿನಲ್ಲಿ ಪ್ರತಿಫಲಿತವಾಗಿ ನೀರಿಗೆ ಬಣ್ಣಗಳ ಮೆರುಗನ್ನು ಕೊಡುವಂತೆ ಮಾಡಲಾಗಿದೆ.

ವಾಸ್ತುವಿನ ದೃಷ್ಟಿಯಿಂದ ಶಾಲಿಮಾರ್ ಬಾಗ್ ಇನ್ನೆಲ್ಲಾ ಉದ್ಯಾನಗಳಿಗಿಂತ ವಿಶಿಷ್ಟವಾಗಿದೆ. ಉದ್ಯಾನ ಮತ್ತು ಸುತ್ತಲಿನ ಪ್ರಕೃತಿ ಸೌಂದರ್ಯಕ್ಕೆ ಧಕ್ಕೆಯಾಗಬಾರದೆಂದು ಉದ್ದೇಶಪೂರ್ವಕವಾಗಿಯೇ ಹೆಚ್ಚು ಸಂಖ್ಯೆಯ ಕಟ್ಟಡಗಳ ನಿರ್ಮಾಣವನ್ನು ಮಾಡಲಾಗಿಲ್ಲ. ದೀವಾನ್ ಎ ಆಮ್‌ನಲ್ಲಿರುವ ನಸುಗೆಂಪು ಮತ್ತು ದೀವಾನ್ ಎ ಖಾಸ್‌ನ ಕಪ್ಪು ಕಟ್ಟಡಗಳು ಮಾತ್ರ ಇಲ್ಲಿರುವ ವಾಸ್ತು ರಚನೆಗಳು. ಇವು ತೆರೆದ ಕಟ್ಟಡಗಳಾಗಿದ್ದು, ಕಮಾನುಗಳುಳ್ಳ ಆಯತಾಕಾರದ ರಚನೆಗಳಾಗಿವೆ. ಕಪ್ಪು ಕಟ್ಟಡವು ಗೋಡೆ ಮತ್ತು ಚಾವಣಿಯಲ್ಲಿ ಆಕರ್ಷಕ ವರ್ಣಚಿತ್ರಗಳನ್ನು ಹೊಂದಿದೆ. ಕಲ್ಲಿನಲ್ಲಿನ ಕುಸುರಿ ಕೆತ್ತನೆಯೂ ಸುಂದರವಾಗಿದ್ದು ಮನ ಸೆಳೆಯುತ್ತದೆ. ಪರ್ಷಿಯನ್ ಕವಿ ಅಮೀರ್ ಖುಸ್ರೋನ ಸಾಲೊಂದನ್ನು ಇಲ್ಲಿ ಕೆತ್ತಲಾಗಿದೆ. ಅದರ ಅರ್ಥ 'ಭೂಮಿಯ ಮೇಲೆ ಸ್ವರ್ಗವೊಂದು ಇರುವುದೇ ಆದರೆ ಅದು ಇಲ್ಲಿದೆ, ಇಲ್ಲಿದೆ, ಇಲ್ಲಿದೆ!'

ಈ ಉದ್ಯಾನವು ಆರು ಕಾವಲು ಗೋಪುರಗಳನ್ನು ಹೊಂದಿದೆ. ಪರ್ವತದ ಹಿನ್ನೆಲೆಯಲ್ಲಿರುವ ಈ ಉದ್ಯಾನವನ್ನು ದಾಲ್ ಸರೋವರಕ್ಕೆ ಸಂಪರ್ಕಿಸುವ ಒಂದು ಮೈಲು ಉದ್ದ ಹಾಗೂ 12 ಗಜ ಅಗಲವಾಗಿರುವ ಐತಿಹಾಸಿಕ ಕಾಲುವೆಯ ಇಕ್ಕೆಲಗಳಲ್ಲಿ, ಸುತ್ತಲಿನ ಪರಿಸರದ ಸೌಂದರ್ಯಕ್ಕೆ ಅನುಗುಣವಾಗಿಯೇ ರೂಪಿಸಲಾಗಿರುವುದು ವಿಶಿಷ್ಟವಾಗಿದೆ. ದೇಶದೆಲ್ಲೆಡೆ ಇರುವ ಮೊಗಲ್ ಉದ್ಯಾನಗಳಿಗೆ ಶಾಲಿಮಾರ್ ಬಾಗ್ ಸ್ಫೂರ್ತಿ ನೀಡಿದ್ದರೂ, ಅವೆಲ್ಲವುಗಳಿಗಿಂತ ಭಿನ್ನವಾಗಿದ್ದು ತನ್ನ ವಿಶೇಷತೆಯನ್ನು ಉಳಿಸಿಕೊಂಡಿದೆ.

ಶಾಲಿಮಾರ್ ಉದ್ಯಾನವನದಲ್ಲಿ ದೇಶವಿದೇಶಗಳ ಹೂಗಳು, ಮರಗಿಡಗಳನ್ನು ಬೆಳೆಸಲಾಗಿದೆ. ಕಾಲುದಾರಿಯ ಅಕ್ಕಪಕ್ಕದಲ್ಲಿ ಅನೇಕ ಬಗೆಯ ಹೂಗಳು ಹತ್ತು ಹಲವು ಬಣ್ಣಗಳು ಮತ್ತು ಆಕಾರದಿಂದ ಕಂಗೊಳಿಸುತ್ತಾ ನಮ್ಮನ್ನು ಸ್ವಾಗತಿಸುತ್ತವೆ. ಕಾಶ್ಮೀರದ ಸಾಂಪ್ರದಾಯಿಕ ಉಡುಪನ್ನು ತೊಟ್ಟು ಫೋಟೊ ತೆಗೆಸಿಕೊಳ್ಳುವುದಕ್ಕೆ ಅವಕಾಶವಿದೆ. ಉಡುಪುಗಳನ್ನು ಬಾಡಿಗೆಗೆ ಕೊಡುವುದಲ್ಲದೆ ಫೋಟೊ ಕೂಡ ತೆಗೆದುಕೊಡುತ್ತಾರೆ. ಇದರ ಶುಲ್ಕವನ್ನು ಮೊದಲೇ ಚೌಕಾಸಿ ಮಾಡಿ ನಿಗದಿಪಡಿಸಿಕೊಳ್ಳುವುದು ಒಳ್ಳೆಯದು. ಶಾಲಿಮಾರ್ ಬಾಗ್ ಸನಿಹದಲ್ಲಿ ಇರುವ ದಾಲ್ ಸರೋವರ ಮತ್ತು ಅದರ ಎದುರಿಗೇ ಇರುವ ನಿಷಾದ್‌ಬಾಗ್ ಸಹಾ ನೋಡಬೇಕಾದ ಸ್ಥಳಗಳು. ಬಹಳ ಕಾಲ ನೆನಪಿನಲ್ಲಿ ಉಳಿಯುವಂತಹ ಅನುಭವವನ್ನು ಶಾಲಿಮಾರ್ ಬಾಗ್ ಭೇಟಿ ನಮಗೆ ನೀಡುತ್ತದೆ.

ಪ್ರತಿಕ್ರಿಯಿಸಿ: feedback@sudha.co.in


ದೀವಾನ್ ಎ ಖಾಸ್‌ನಲ್ಲಿರುವ ಕಪ್ಪು ಮಹಲ್, ಸುಂದರ ಕಮಾನುಗಳು, ವರ್ಣಮಯ ಅಲಂಕಾರದ ಗೋಡೆ, ಚಾವಣಿ